**C C No. 640/2023**
ಪಿ .ಡಬ್ಲ್ಯೂ-1

ದಿನಾಂಕ 23-01-2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರೆದ ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ ಕೆ ಎಸ್ ವಕೀಲರಿಂದಃ-**

ಆರೋಪಿಗೆ ಸಾಲವನ್ನು ಕೊಡುವಾಗ ಬದ್ರತೆಗೊಂದು ಇಬ್ಬರು ಜಾಮೀನುದಾರರು ಮತ್ತು ಒಂದು ಬಾಂಡ್ ನ್ನು ತೆಗೆದುಕೊಂಡಿರುತ್ತೇವೆ. ಸದರಿ ಜಾಮೀನುದಾರರ ಹೆಸರು ಮತ್ತು ಬಾಂಡಿನ ಸಂಗತಿಯನ್ನು ನನ್ನ ನೋಟಿಸದಲ್ಲಿ ಮತ್ತು ಫಿರ್ಯಾದಿಯಲ್ಲಿ ಬರೆಸಿರುತ್ತೇನೆ. ಸದರಿ ಸಂಗತಿ ಅವುಗಳಲ್ಲಿ ನಮೂದು ಇರುವದಿಲ್ಲ ಎಂದರೆ ಸರಿಯಲ್ಲ. ಬಾಂಡಿನಲ್ಲಿ ಏನು ಬರೆದಿದೆ ಎಂದು ಈಗ ಹೇಳಲು ಬರುವದಿಲ್ಲ ಆದರೆ ಅದು ನೋಟರಿಕೃತ ಆಗಿರುತ್ತದೆ. ಬಾಂಡಿನ ಮೇಲೆ ಬರೆದಿರುವ ಒಪ್ಪಿಗೆ ಪತ್ರದ ವಿಷಯಗಳನ್ನು ನಮ್ಮ ಬ್ಯಾಂಕಿನವರೇ ನಮೂದಿಸಿ ತಯಾರು ಮಾಡಿರುತ್ತೇವೆ ಎಂದರೆ ಸರಿ. ಆರೋಪಿ ಸಾಲವನ್ನು ಮರಳಿ ಕೊಡಲು ಒಂದು ವರ್ಷದ ಅವಧಿಗೆ ಒಪ್ಪಿರುತ್ತಾರೆ. ಸದರಿ ಅವಧಿಯಲ್ಲಿ ಆರೋಪಿ ಯಾವುದೇ ಅಸಲು ಮತ್ತು ಬಡ್ಡಿಯನ್ನು ತುಂಬಿರುವದಿಲ್ಲ. ಆರೋಪಿ 03 ಕಂತಿನಲ್ಲಿ ಸಾಲವನ್ನು ತುಂಬದೇ ಇದ್ದಾಗ ನಮ್ಮ ಬ್ಯಾಂಕಿನ ನಿಯಮಾವಳಿಗಳಂತೆ ನೋಟಿಸನ್ನು ಕೊಟ್ಟಿರುತ್ತೇವೆ. ಯಾವ ದಿನಾಂಕದಂದು ಕೊಟ್ಟಿರುತ್ತೇವೆ ಎಂದು ಹೇಳಲು ಬರುವದಿಲ್ಲ. ಅದನ್ನು ಹಾಜರು ಪಡಿಸಿರುವದಿಲ್ಲ. ಹೇಳಿದಂತೆ ಆರೋಪಿಗೆ ಸದರಿ ನೋಟಿಸನ್ನು ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯ 50 ಸಾವಿರ ಸಾಲಕ್ಕೆ ವಾರ್ಷಿಕ ಬಡ್ಡಿ ಅಂತಾ 17 % ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ, ಫಿರ್ಯಾದಿ ಮತ್ತು ನೋಟಿಸದಲ್ಲಿ ಸದರಿ ಬಡ್ಡಿ ಕುರಿತಾಗಿ ನಮೂದು ಮಾಡಿರುವದಿಲ್ಲ ಎಂದರೆ ಸರಿ. ಫಿರ್ಯಾದಿಯಲ್ಲಿ ಕಾಣಿಸಿರುವ ಬಡ್ಡಿ ಮೊತ್ತವನ್ನು ಬ್ಯಾಂಕಿನ ಬೈಲಾದಂತೆ 17 % ದಂತೆ ರೂ 50 ಸಾವಿರಕ್ಕೆ ಲೆಕ್ಕಾ ಮಾಡಿ 45,834/- ಅಂತಾ ನಮೂದು ಮಾಡಿರುತ್ತೇವೆ. ಬ್ಯಾಂಕಿನ ಬೈಲಾ ಪ್ರತಿಯನ್ನು ಹಾಜರು ಮಾಡಿರುವದಿಲ್ಲ. ದಿನಾಂಕ 13-06-2018 ರಿಂದ ದಿನಾಂಕ 10-04-2023 ವರಗೆ ಅಂದರೆ 05 ವರ್ಷಗಳ ಅವಧಿಯಲ್ಲಿ ಆರೋಪಿಗೆ ಸಾಲವನ್ನು ಮರಳಿ ಪಡೆಯಲು ತಿಳುವಳಿಕೆ ನೋಟಿಸಗಳನ್ನು ಅಂದಾಜು 03 ಸಲ ಕೊಟ್ಟಿರುತ್ತೇವೆ. ಸದರಿ ನೋಟಿಸಿನ ಪ್ರತಿಗಳನ್ನು ಹಾಜರು ಮಾಡಿರುವದಿಲ್ಲ. ನೋಟಿಸಗಳ ಆಧಾರದ ಮೇಲೆ ಆರೋಪಿಯ ಮೇಲೆ ಕ್ರಮ ಜರುಗಿಸಲು ಬ್ಯಾಂಕಿಗೆ ಅಧಿಕಾರ ಇತ್ತು ಎಂದರೆ ಸರಿ. ಆರೋಪಿ ಹಣವನ್ನು ತುಂಬುವದಾಗಿ ಹೇಳಿದ ಕಾರಣ ಯಾವುದೇ ಕ್ರಮವನ್ನು ಜರುಗಿಸಿರುವದಿಲ್ಲ. ಆರೋಪಿ ಮುದೋಳ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ದಿಂದ ತೆಗೆದುಕೊಂಡಿದ್ದ 50 ಸಾವಿರ ಸಾಲವನ್ನು 2018 ರಲ್ಲಿ ತುಂಬಿರುವ ಕಾರಣ ನಮ್ಮ ಬ್ಯಾಂಕಿನವರು ಆತನ ಮೇಲೆ ಸದರಿ ಅವದಿಯಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಂಡಿರುವದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಚಕ್ ಮೇಲಿನ ಬರವಣಿಗೆ ಮತ್ತು ಸಹಿ ಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಮುದೋಳ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದಿಂದ ಆರೋಪಿ ಸಾಲ

ತೆಗೆದುಕೊಳ್ಳುವಾಗ ಬದ್ರತೆಗೆಂದು ಕೊಟ್ಟ ಚಕ್ ನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪಿರ್ಯಾದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2 ನ್ನು ಆರೋಪಿ ಬರ್ತಿ ಮಾಡಿ ಕೊಟ್ಟಿರುವದಿಲ್ಲ ಎಂದರೆ ಸರಿಯಲ್ಲ. 2018 ರಲ್ಲಿ ಸುಲಭ ಸಾಲ ಯೋಜನೆಯಡಿ ಆರೋಪಿಗೆ ಸಾಲವನ್ನು ಕೊಟ್ಟಿರುತ್ತೇವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯ ಸಾಲದ ಖಾತೆಯನ್ನು ಹಾಜರು ಪಡಿಸಿರುವದಿಲ್ಲ ಎಂದರೆ ಸರಿ. ಆರೋಪಿ ತೆಗೆದುಕೊಂಡಿದ್ದ ಸಾಲವನ್ನು ಮರಳಿ ಬ್ಯಾಂಕಿಗೆ ತುಂಬಿದ್ದರೂ ಸಹ ಹೆಚ್ಚಿನ ಬಡ್ಡಿ ವಸೂಲಿ ಮಾಡಲು ಅಸಲು ಅಂತಾ 50 ಸಾವಿರ ಮತ್ತು ಬಡ್ಡಿ ಅಂತಾ 45,834/- ಅಂತಾ ಲೆಕ್ಕಾ ಮಾಡಿ ಒಟ್ಟು ಬಾಕಿ ಅಂತಾ 95,834/- ಅಂತಾ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-3 ರ ದಾಖಲೆ ಆರೋಪಿಗೆ ಸಂಬಂದಿಸಿರುವದಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಸುಳ್ಳು ಪಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ .**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.